ಮಾಡಿದ ಹತ್ತಿಯ ಸುರುಳಿ. ಆ ಹಿಂಜಿದ ಹತ್ತಿಯನ್ನು ನೂಲುವುದು ಅನುಭವದ ಕಿವಿಮಾತು ಆದ ಹಾಗೆ. ತೀರ ಐಂದ್ರಿಕವಾಗಿದ್ದಾಗ ಸಿಂಗಾರಿ ಸೊಳ್ಳಿ ಹಾಗೆ ಹಾಡಿನಲ್ಲೆ ಕಿವಿ ಗಲ್ಲ ಕಡಿದ ನೆಲೆಯಿಂದ ಪ್ರಕೃತಿ ಪುರುಷಗೆ ಸೋತಾಗ ಅನುಭವ ಕಿವಿಮಾತು ಆಗುವ ಹಂತಕ್ಕೆ ಕವನ ಏರಿದೆ. ನೂಲು ಹಾಸು ಹೊಕ್ಕು ಬಟ್ಟೆಯಾಗುತ್ತದೆ (ಬಟ್ಟೆ ಎಂದರೆ ದಾರಿಯೂ ಹೌದು). 'ಹಾಸಾದ ಹಾಡಿಗೆ ಹೊಕ್ಕಾತು ಕಿನ್ನರಿ' ಎಂಬಲ್ಲಿ ಹಾಸು (ನಗು, ಉಲ್ಲಾಸ, ನಲಿವು) 'ಹೊಕ್ಕಾತು' (ಹೊಕ್ಕಿ + ಆತು) (ಹೊಗು = ಒಳಸೇರು) ಎಂಬಲ್ಲಿರುವ ಶ್ಲೇಷಾರ್ಥಗಳನ್ನು ಗಮನಿಸಬೇಕು. ಇಲ್ಲಿ ಕವನದೊಳಗೆ ರೂಪಕ ಮತ್ತು ಉಪಮೆ (ಹೋಲಿಕೆ) ಅಲಂಕಾರಗಳ ಮೂಲಕ ಕವನ ಸೃಷ್ಟಿಸುವ ಬೆರಗನ್ನೂ ಗಮನಿಸಬೇಕು.

'ಪ್ರಾಣದ್ವಂಜಿಯೆ' ನೂತು ಎನ್ನುವಲ್ಲಿ ಹತ್ತಿ (Cotton) ಪ್ರಾಣದ ರೂಪಕ. ಆದರೆ ಅದರ ನೂಲು ಹಾಸಿ ಹೊಕ್ಕಬೇಕಾದಲ್ಲಿ ನೂಲಿನ ಬದಲು ಇರುವುದು ಹಾಡು ಹೊಕ್ಕ ಉಂಟಾಗುವ ಕಿನ್ನರಿ ('ಹಾಸಾದ ಹಾಡೀಗೆ ಹೊಕ್ಕಾತು ಕಿನ್ನರಿ') 'ಹಾಸು-ಹೊಗು'ವ ಹಾಡು ಹೇಗೆಂದರೆ, ನೆಯ್ಗೆಯೊಳಗೆ ನೂಲು ಹೋದಹಾಗೆ. ಚರಣದ ಈ ನಾಲ್ಕು ಸಾಲುಗಳಲ್ಲಿ ಹಾಸುಹೊಕ್ಕುವ- ವಸ್ತ್ರ ನೇಯುವ ಕ್ರಿಯೆ, ಪ್ರಾಣದ ಅಂಜಿಯನ್ನು ನೂಲುವ ಕ್ರಿಯೆಯೇ ಹೊಸ ಅನುಭವವಾಗಿ, ಕಿವಿ ಮಾತಾಗಿ, ಕಿವಿಯ ಮೂಲಕವೇ ಹಾಸಾದ ಹಾಡು ಹೊಗುವ (ಸಿದ್ಧನ) ಕಿವಿಯ ಅನುಭವ ನೇಯ್ಗೆಯೊಳಗೆ ನೂಲು ಹೊಕ್ಕ ಹಾಗೆ ಕಿನ್ನರಿಯೊಳಗಾಗುವ ಕ್ರಿಯೆ. ಅದರಲ್ಲೆ ಬದುಕಿನ ನೂಲು ಹೊಗುವ ಮಾಯೆಯ ಅನುಭವ ವೇದ್ಯವಾಗಬೇಕು.

'ಪ್ರಕೃತಿ ಮತ್ತು ಪುರುಷ' ಲೋಕಸೃಷ್ಟಿಗೆ ಕಾರಣವಾಗುವ ಸೃಜನಕ್ರಿಯೆಯು ಮುಂದೆ 'ತುಂತೂರು ಮಳೆ' ಮೂಲಕ ಸೂಚಿತವಾಗಿದೆ. ಆದರೆ ಆ ಮಳೆಯ ಹೋಲಿಕೆ ಸೂಚಿಸುವುದು ಜೀವರಸವೇ ಹಿಂಡಿ ತಂತಿಯ ತುಂಬೆಲ್ಲ ಸಿಡಿದ್ದಾಂಗ. ಕವನದ ಮೊದಲ ಪಲ್ಲವಿಯಲ್ಲೆ ಜಂಗಮಯ್ಯಗೆ ಸೋತು ಅವನ ಕೈಯಲ್ಲಿ ಕಿನ್ನರಿ ಆದ ಮಾಯೆ ನುಡಿಯುವುದು 'ಮೈಯಾಗ ಬಂದ್ದಾಂಗ' ಈ ಕಿನ್ನರಿ, ಕವನದ ಕೊನೆಯಲ್ಲೂ ಮತ್ತೆ ಇದೆ. ಕೊನೆಯಲ್ಲಿ 'ಮರುಳಸಿದ್ಧನ ಕೈಯ-ಕಿನ್ನರಿಯಾಗಿ ಸಿಕ್ಕ' ಮಾಯೆ ಅಲ್ಲೆ ಇದ್ದಾಳೆ. ಆದರೆ ಈಗ ಅವಳೊಬ್ಬಳ ನುಡಿಯಲ್ಲ. ಪ್ರಕೃತಿ-ಪುರುಷ ಮಟ್ಟಕ್ಕೆ ಐಂದ್ರಿಕ ಅನುಭವ ಏರಿದಾಗ, ಮಾಯೆ ಒಬ್ಬಳೆ ಇರಲು ಸಾಧ್ಯವಿಲ್ಲ. ಲೋಕಸೃಷ್ಟಿಯ ಭಾಗವಾದಾಗ 'ಮಾಯೆಯೆ ಮೈಗೆ ಮೈ ನುಡಿದ್ದಾಂಗ' ಕವನದ ಭಾವ ಲಯವೂ ಅನುಭವದ ಕಿವಿ ಮಾತೂ ಐಂದ್ರಿಕ ಸೌಂದರ್ಯದಿಂದ ಬೆಳೆಯುತ್ತಾ ರಸಾತ್ಮಕ ಸೌಂದರ್ಯವಾಗಿ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ಸೌಂದರ್ಯವನ್ನೂ ಸೂಚಿಸಲು ಹವಣಿಸುತ್ತದೆ. 'ಮೈಗೆ ಮೈ' ಎಂಬಲ್ಲಿ ಗೆಜ್ಜೆ ಪೈಜಣ ಕಟ್ಟಿ ಕುಣಿವ ಅಭೇದ ಲಯದ ಸಂಕೇತ ಅರ್ಥದ ಹಂಗಿಲ್ಲದೆ ಭಾವಸ್ತರದ ಎತ್ತರಕ್ಕೆ ಏರಲು ಸಹಕರಿಸುತ್ತದೆ. ಪ್ರಕೃತಿ-ಪುರುಷರ ವಿವರಗಳನ್ನು ಸೂಚಿಸುವುದು ಸಿದ್ಧ-ಮಾಯೆಯರನ್ನು ಮೀರಿದ ಬೌದ್ಧಿಕವಾದ ತಾತ್ವಿಕತೆಯನ್ನು ಸೂಚಿಸುವುದಕ್ಕಾಗಿಯೇ ಆಗಿದೆ. ಕವನದ ಮೊದಲ ಸಾಲಿನಿಂದ ಕೊನೆಯ ಸಾಲಿನವರೆಗೆ ಕಾವ್ಯಾನುಭವ ಸಾವಯವ ಶಿಲ್ಪದ ಸಮಗ್ರೀಕರಣ ತತ್ವವನ್ನೂ ಸಮರ್ಥವಾಗಿ ಪ್ರತಿನಿಧಿಸುತ್ತದೆ ಎಂಬುದು ಆಧುನಿಕ ಓದುಗನಿಗೆ ಹೊಳೆಯದಿರದು.

'ಸುಖಸ್ಪರ್ಶ' ಎಂಬ ಅಷ್ಟ ಷಟ್ಪದಿಯಲ್ಲಿ ('ಉಯ್ಯಾಲೆ' ಸಂಕಲನ) ಬೇಂದ್ರೆಯವರು ಸ್ಪರ್ಶ ಕೇವಲ ದೈಹಿಕವಾದಾಗ ಕಳಕೊಳ್ಳುವ ಸೃಷ್ಟಿಶೀಲ ಪಾವಿತ್ರ್ಯವನ್ನು ಸೂಚಿಸುತ್ತಾರೆ. 'ಮಾಯಾಕಿನ್ನರಿ', ನಲ್ಲನಲ್ಲೆಯರ ಮೈ ಹಿಗ್ಗಿನ ಮುಳ್ಳಿಗೆ ಸಿಕ್ಕುವ ಮೂಲಕ ಐಂದ್ರಿಕ ಸೌಂದರ್ಯ ಸೂಚಿಸುವ ಶೃಂಗಾರ ರಸದ ದೈಹಿಕ ಮಗ್ಗುಲನ್ನು ಕಾಣಿಸುತ್ತದೆ. ಆದರೆ ಕವನ ಅದನ್ನು ಪ್ರಕೃತಿ-ಪುರುಷರ ನೆಲೆಗೂ ಚಿಮ್ಮಿಸುತ್ತದೆ. ನಾಥ ಪಂಥದ ಸಿದ್ಧರು ಕೆಲವು ಸಾಧನೆಗಳಲ್ಲಿ ಗಂಡು-ಹೆಣ್ಣಿನ ದೈಹಿಕ ಸಮಾಗಮವೂ ಅದರ ಅವಿಚ್ಛಿನ್ನತೆಯಲ್ಲಿ ಆತ್ಮ-ಪರಮಾತ್ಮನ ಸಮಾಗಮಕ್ಕೆ ಸಮಾನವಾದ ಅನುಭವವನ್ನು ಸೂಚಿಸಬಲ್ಲದು (ಗಂಡು ಹೆಣ್ಣುಗಳಿಬ್ಬರಲ್ಲೂ ಇರುವ ಆತ್ಮಗಳಿಂದಾಗಿ) ಎಂಬುದನ್ನು ಒಪ್ಪುತ್ತಾರೆ. ತಾಂತ್ರಿಕ ಸಾಧನೆಗಳಲ್ಲಿ ಆ ವಿಚಾರ ಬರುತ್ತದೆ. ಹಾಗಾಗಿ ಕವಿ ಬೇಂದ್ರೆ ಕೇವಲ ವೇದವಿತ್ ಕವಿಯಲ್ಲ, ಸುಡುಗಾಡು ಸಿದ್ಧರ ಪಂಥವನ್ನೂ ಒಳಗೊಂಡ ಕವಿ.

●